ರೈಲ್ವೇ ಸ್ಟೇಷನ್ ತನಕ ಬಂದು ಒರಗು ಬೆಂಚಿನ ಮೇಲೆ ಕೂತರು. ಸಂಜೆ ಆರರ ರೈಲು ಬಂತು. ಐದು ನಿಮಿಷ ಇದ್ದು ಹೋಯಿತು. ಮತ್ತೆ ರೈಲ್ವೇ ಸ್ಟೇಷನ್ ಖಾಲಿ. ಇನ್ನು ರೈಲು ಬರೋದು ಎಂದರೆ ರಾತ್ರಿ ಹನ್ನೊಂದಕ್ಕೆ ಒಂದು, ಮಧ್ಯರಾತ್ರಿ ಮೂರಕ್ಕೆ ಇನ್ನೊಂದು. ಇಬ್ಬರೂ ಮನೆ ಕಡೆ ಹೊರಟಾಗ ಎಲ್ಲಿಂದಲೋ ಮಗು ಅಳೋ ಸದ್ದು ಕೇಳಿ ಬಂತು. ಸುತ್ತ ಮುತ್ತ ನೋಡಿದರು, ಯಾರೂ ಇರಲಿಲ್ಲ. ಇದ್ದ ಒಬ್ಬರೇ ಸ್ಟೇಷನ್ ಮಾಸ್ಟರು ಆಫೀಸ್ ಕೋಣೇಲಿ ಕೂತಿದ್ದರು. ಮತ್ತೆ ಮಗು ಅಳೋ ಸದ್ದು. ಇಬ್ಬರೂ ಒಂದೊಂದು ಕಡೆ ನೋಡಿದರು. ಸ್ಟೇಷನ್ ತುತ್ತ ತುದಿಯಲ್ಲಿ ಒಂದು ಗುಂಡಿಯಂಥ ಜಾಗದಲ್ಲಿ ಸುಂದರವಾದ ಮಗುವೊಂದು ಮಲಗಿತ್ತು. ಬಿಳಿ ಶಾಲಿನ ಮೇಲೆ ಮಲಗಿಸಿ, ಬಾಯಿಗೆ ಫೀಡಿಂಗ್ ಬಾಟಲು ಇಟ್ಟು ಯಾರೋ ಹೊರಟುಹೋಗಿದ್ದರು. ನೋಡಿದರೆ ಮೂರ್ನಾಲ್ಕು ತಿಂಗಳ ಮಗು ಇದ್ದ ಹಾಗಿದೆ. ಪಾರ್ವತಿಗೆ ಮಾತೃ ವಾತ್ಸಲ್ಯ ಉಕ್ಕಿ ಹರಿದು ಮಗುನ ಎತ್ಕೊಂಡ್ರು. ಸುತ್ತ ಮುತ್ತ ನೋಡಿದರು. ಯಾರೂ ಅವರನ್ನು ಗಮನಿಸುತ್ತಿರಲಿಲ್ಲ. "ಮೊದಲು ಇದನ್ನು ಮನೆಗೆ ಕರ್ಕೊಂಡು ಹೋಗೋಣ. ಆಮೇಲೆ ಮುಂದಿನದು" ಅಂದು ಅವರೇ ದಾಪುಗಾಲು ಹಾಕಿಕೊಂಡು ಮನೆಗೆ ಹೋದರು.

ಕೇಳಿದವರಿಗೆಲ್ಲ ಇದು ನಮ್ಮ ನೆಂಟರ ಮಗು ಎಂದೇ ಹೇಳಿಕೊಂಡು ಬೆಳೆಸಿದರು. ಇಷ್ಟು ವರ್ಷದ ದಾಂಪತ್ಯದಲ್ಲಿ ನಮಗೆ ಸಂತಾನ ಭಾಗ್ಯವಿಲ್ಲದಿರುವುದನ್ನು ಕಂಡ ಆ ಭಗವಂತ ಈ ಮಗೂನ ನಮಗೆ ಕರುಣಿಸಿದ್ದಾನೆ ಅಂತ ನಂಬಿದರು. ಆದರೆ ಈ ಮಗು ಯಾರದ್ದಿರಬಹುದು ಅನ್ನೋ ಪ್ರಶ್ನೆ ಮಾತ್ರ ಅವರನ್ನು ಕಾಡುತ್ತಿತ್ತು. ಗುರಪ್ಪ ಮಗುವಿನ ಕಡೆಯೇ ನೋಡುತ್ತಾ "ನನಗನಿಸುತ್ತೆ ರೈಲಿನಲ್ಲಿ ಬಂದೋರು ಯಾರೋ ಈ ಮಗೂನ ಬಿಟ್ಟು ಹೋಗಿದ್ದಾರೆ. ಗಂಡು ಮಗು ಬೇಕು ಅಂತ ಆಸೆಪಟ್ಟಿದ್ದೋರು ಅತ್ತೆಗೋ ಮಾವನಿಗೋ ಅಥವಾ ಇನ್ಯಾರಿಗೋ ಹೆದರಿ ಈ ಹೆಣ್ಣು ಮಗೂನ ಹೀಗೆ ದೂರ ಮಾಡಿರಬಹುದು. ಇಲ್ಲ, ಮದುವೆಗೆ ಮುಂಚೆಯೇ ಮಗುವಾದ ಯಾವುದೋ ಹೆಣ್ಣು ಇದನ್ನು ದೂರ ಮಾಡಿಕೊಂಡಿರಬಹುದು. ಈ ಮಗು ನಮ್ಮ ಊರಿನದಂತೂ ಅಲ್ಲ. ಯಾಕೆಂದ್ರೆ ನಮ್ಮ ಊರಲ್ಲಿ ಅಂಥೋರು ಯಾರೂ ಇಲ್ಲ. ಜೊತೆಗೆ ಇಷ್ಟು ಸಣ್ಣ ಊರಿನಲ್ಲಿ ಯಾರ ಮನೇಲಿ ಮಗು ಹುಟ್ಟಿದರೂ ಅದು ಎಲ್ಲರಿಗೂ ತಿಳಿಯುತ್ತೆ. ಈಚೆಗೆ ಯಾವ ಮಗುವೂ ಹುಟ್ಟಿಲ್ಲ. ಹೀಗಿರುವಾಗ ಮಗು ಕಳೆದುಹೋಯ್ತು ಅನ್ನೋ ಸುದ್ದಿ ಎಲ್ಲಿಂದ ಬಂದೀತು. ಯಾರೋ ರೈಲಿನಲ್ಲಿ ಬಂದವರೇ ಸರಿಯಾಗಿ ಪ್ಲಾನ್ ಮಾಡಿ ಮಗೂನ ಬಿಟ್ಟು ರೈಲು ಹತ್ತಿ ಹೊರಟುಹೋಗಿದ್ದಾರೆ" ಅಂದರು. ದಿನೇ ದಿನೇ ಈ ವಿಷಯವೇ ಗಟ್ಟಿಯಾಯಿತು. ಅದೂ ಒಂದು ರೀತಿಯಲ್ಲಿ ಒಳ್ಳೆಯದೇ ಆಯಿತು. ಹೇಗೂ ನಮಗೆ ಮಕ್ಕಳಿಲ್ಲ. ನಾವೇ ಇದನ್ನು ಸಾಕ್ಕೊಂಡ್ಬಿಡೋಣ ಅಂತ ಪಾರ್ವತಿ ನಿರ್ಧಾರ ಮಾಡೇಬಿಟ್ಟಿದ್ದರು. ಆದರೆ ಗುರಪ್ಪನಿಗೆ ಅದು ಇಷ್ಟ ಇಲ್ಲ. ಹಾಗಂತ ಹೆಂಡತಿಗೆ ಹೇಳೋಕೂ ಆಗಲಿಲ್ಲ. ಯಾರೋ ಪಾಪ ತಾಯಿ ಏನು ಧಾವಂತವೋ ಏನೋ, ಏನು ಆತಂಕವೋ ಏನೊ ಅವಳು ಯಾವ ಪರಿಸ್ಥಿತಿಯಲ್ಲಿದ್ದಳೋ ಏನೋ ಅಂತೂ ಮಗೂನ ಬಿಟ್ಟು ಹೋಗಿದ್ದಾಳೆ. ಒಂದಲ್ಲ ಒಂದು ದಿನ ಅವಳಿಗೆ ಅರಿವುಂಟಾಗಿ ಮಗೂನ ಹುಡುಕಿಕೊಂಡು ಬಂದೇ ಬರ್ತಾಳೆ ಅಂತ ಗುರಪ್ಪನವರ ಮನಸ್ಸು ಹೇಳುತ್ತಿತ್ತು. ಹೀಗಾಗಿ ಅವರು ಅವತ್ತಿನಿಂದಲೇ ಸಂಜೆ ಆರು ಗಂಟೆಗೆ ರೈಲು ಬರೋ ಸಮಯಕ್ಕೆ ಸರಿಯಾಗಿ ರೈಲ್ವೇ ಸ್ಟೇಷನ್ನಿಗೆ ಬಂದು ಕಾದು ಹೋಗೋರು. ಮಗೂನೂ ಕರ್ಕೊಂಡು ಬರೋರು. ಈ ಮಗೂನ ಕಂಡ ಹೆಣ್ಣು ರೈಲಿನಿಂದ ಇಳಿದು ಮಗೂನ ಕರ್ಕೊಂಡು ಹೋಗಬಹುದು ಅಂತ. ಪಾರ್ವತಿ ಆ ಮಗೂನ ಅಷ್ಟು ದೂರ ಯಾಕೆ ಕರ್ಕೊಂಡು ಹೋಗ್ತೀರ ಅಂದ್ರೂ ಕೇಳ್ತಿರಲಿಲ್ಲ.